ದಿನಾಂಕಃ 05-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು, ಅದರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ಸದರಿ ವಿಷಯವನ್ನು ತಿಳಿದುಕೊಂಡು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಮೇಲೆ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲ ಸಂಗತಿಗಳು ನಿಜ ಸಂಗತಿಗಳಿರುತ್ತವೆ.

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ.ಸಿ.ಆರ್.ಎಸ್ ವಕೀಲರಿಂದಃ-**

1. ನಾಲ್ಕು ಪ್ರಾಪರ್ಟಿ ಕಾರ್ಡಗಳ ಧೃಢಿಕೃತ ನಕಲುಗಳನ್ನು ಹಾಜರ ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-4 ಎಂದು ಗುರುತಿಸಲಾಯಿತು.

2. ಒಂದು ಅರ್ಜಿಯ ಧೃಢಿಕೃತ ನಕಲನ್ನು ಹಾಜರ ಪಡಿಸಿದ್ದು ನಿಪಿ-5 ಎಂದು ಗುರುತಿಸಲಾಯಿತು.

3. ಒಂದು ಹೇಳಿಕೆಯ ಧೃಢಿಕೃತ ನಕಲನ್ನು ಹಾಜರ ಪಡಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು.

4. ಒಂದು ನೋಟಿಸಿನ ಧೃಢಿಕೃತ ನಕಲನ್ನು ಹಾಜರ ಪಡಿಸಿದ್ದು ನಿಪಿ-7 ಎಂದು ಗುರುತಿಸಲಾಯಿತು.

5. ಒಂದು ನಕಾಶೆಯ ಧೃಢಿಕೃತ ನಕಲನ್ನು ಹಾಜರ ಪಡಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು.

6. ನಾಲ್ಕು ಪ್ರಮಾಣ ಪತ್ರಗಳನ್ನು ಹಾಜರ ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ ನಿಪಿ-12 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ತನ್ನ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಲಾಗಿ, ಕಾಲವಾಶ ನೀಡಿ ಸಾಕ್ಷಿಯ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ